ಯಾವುದೋ ಗ್ಯಾನದಲ್ಲಿ ಏನೋ ಟೈಪ್ ಮಾಡಿ, ಅರೆ, ಎಂದು ಗಡಿಬಿಡಿಯಲ್ಲಿ ಡಿಲೀಟ್ ಮಾಡಲು ಹೋಗಿ ಎಂಟರ್ ಒತ್ತಿಬಿಟ್ಟ. ಆ ಕಡೆಯಿಂದ 'ಹೀ... ಹೀ... ಹೀ!...' ಎಂದು ಕುದುರೆ ಕೆನೆದ ಹಾಗೆ ನಗು ಉಕ್ಕಿಸಿ, ನಾಲ್ಕು ಎಮೋಟಿಕಾನ್ ಹಾಕಿ, ಅದರ ಕೆಳಗೆ 'ವಾಟ್ ಎ ಜೋಕ್!' ಅಂತ ಹೊಡೆದು, ಅವನ ಉತ್ತರಕ್ಕೂ ನಿರೀಕ್ಷಿಸದೆ, 'ಭಾನುವಾರ ಸಂಜೆಗೆ ಭಾಜೀರಾವ್ ಮಸ್ತಾನಿ ಬುಕ್ ಮಾಡುತ್ತಾ ಇದೀನಿ. ಬರುತ್ತೀಯಾ?' ಅಂತ ಕೇಳಿದಳು. 'ಸಾರಿ. ನಾಟ್ ಇಂಟರೆಸ್ಟೆಡ್' ಅಂತ ಹಾಕಿ, ಇದ್ದ ಅಲ್ಪಸ್ವಲ್ಪ ಆಸಕ್ತಿಯೂ ಕಳೆದುಹೋದಂತೆನ್ನಿಸಿ, ಟಪ್ಪಂತ ಲ್ಯಾಪ್‌ಟಾಪ್ ಮುಚ್ಚಿ, ಅದರ ಮೇಲೆ ತಲೆಯಿಟ್ಟು ಮಲಗಿದ.

ಥತ್! ಎಂತಾ ಖಾಲಿ ಜೀವನ! ಎಲ್ಲೋ, ಎಂದೋ ಕಂಡ ಊರ ಕೆಲ ಆಪ್ತ ಯುವತಿಯರ ಅಸ್ಪಷ್ಟ ಮುಖಗಳನ್ನು ಕನಸಿನಲ್ಲೆಂಬಂತೆ ನೆನೆಯುತ್ತಾ ಅಮೂರ್ತತೆಯನ್ನು ಮೂರ್ತ ರೂಪಕ್ಕೆ ಇಳಿಸಲು ನೋಡಿದ! ತನ್ನನ್ನು ತುಂಬಾ ಕಾಡಿದ ಮುಖ ಯಾರದ್ದು ಎಂದು ಬಾಲ್ಯಕಾಲದಿಂದಲೂ ಒಡನಾಡಿದ ಹಲವು ಹುಡುಗಿಯರನ್ನು ಮನದ ಸ್ಕ್ರೀನಿನೊಳಗೆ ಸಾಕ್ಷಾತರಿಸಿಕೊಂಡ. ಎಲ್ಲವೂ ಹರಿದುಹೋಗುವ ಅಸ್ಪಷ್ಟ ಚಹರೆಗಳಾಗಿಯೇ ಗೋಚರಿಸಿದವು. ಒಂದು ಸ್ಥಿರ ಚಿತ್ರವೂ ಮನದಲ್ಲಿ ಅಚ್ಚೊತ್ತಿಸಿಕೊಂಡು ಹೃದಯ ಹಿಂಡದಾಗ, ಹಾಗಾದರೆ ತಾನು ನಿಜಕ್ಕೂ ಗೌತಮ ಬುದ್ಧನೇ? ಎಂದು ಯೋಚನೆಯಿಟ್ಟುಕೊಂಡಿತು. ಅದೆಷ್ಟು ಹುಡುಗಿಯರು ಒನ್ ನೈಟ್ ಸ್ಟ್ಯಾಂಡ್‌ನಲ್ಲಿ ಜೀವನ ಸಾಗಿಸುತ್ತಿದ್ದಾರೆ. ಗೊತ್ತಿದ್ದೂ ಒಮ್ಮೆಯೂ ಅಂತಹದಕ್ಕೆ ಪ್ರಯತ್ನಿಸಲಿಲ್ಲವೆಂದರೆ, ಈ ಸಾವಿನ ಮುಖಾಮುಖಿಯ ಮುಂಚೆಯೇ ತಾನು ಬದುಕಿನಲ್ಲಿ ಒಪ್ಪಂದ ಮಾಡಿಕೊಂಡಿದ್ದೇನೆಯೇ?

ಲ್ಯಾಪ್‌ಟಾಪನ್ನು ದೊಡ್ಡದಾಗಿ ಮತ್ತೆ ತೆರೆದು ಕುಳಿತ. ಕಂಪ್ಯೂಟರ್ ಕೀ ಬೋರ್ಡ್ ಒದ್ದೆಯಾಗುತ್ತಿದ್ದಂತೇ ಜಾಗೃತಗೊಂಡ. ಕೇವಲ ಮೂಗು ಸೀಟಿಕೊಳ್ಳುವುದಕ್ಕಾಗಿ ತಾನಲ್ಲಿ ಕುಳಿತಿಲ್ಲವೆಂದು ಎಚ್ಚರಗೊಳ್ಳುತ್ತಿದ್ದಂತೆ, ಇವನ್ನೆಲ್ಲಾ ನಿಜಕ್ಕೂ ನೋಟ್ ಮಾಡುವ ಅವಶ್ಯಕತೆ ತನಗಿದೆಯೇ ಎಂಬ ವಿಲಕ್ಷಣ ಅನುಮಾನ, ಬೇಸರಿಕೆ ಮೂಡಿತು. ಸಾಕು, ಹೋಗಿ ಮಲಗೋಣ ಎಂದು ಸಾವಧಾನದಿಂದಲೇ ಕಂಪ್ಯೂಟರ್ ಮುಚ್ಚಿ ಏಳುವಾಗ ತನ್ನ ಬದುಕಿನ ಹಾಗೆ ತನ್ನ ಸಾವು ಕೂಡಾ ಒಂದು ನಿರ್ಗತಿಕ ಸಾವಾಗಬಾರದು, ಅದಕ್ಕೋಸ್ಕರವಾದರೂ ಎಲ್ಲವನ್ನೂ ಕೂಲಂಕಷವಾಗಿ ಶುರುವಿನಿಂದ ಪ್ರಾರಂಭಿಸಬೇಕು. ಇನ್ನು ಉಳಿದ ಕೆಲ ದಿನಗಳನ್ನಾದರೂ ಏನು ಮಾಡಬೇಕು ಎಂದು ಸರಿಯಾಗಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳಬೇಕು. ತಕ್ಷಣ ಮನಸ್ಸು ಚುರುಕಾಗಿ ಹಾಗಾದರೆ ತನ್ನ ಆಸ್ತಿಯನ್ನೆಲ್ಲಾ ಯಾವುದಾದರೂ ಅನಾಥಾಶ್ರಮಕ್ಕೆ ಬರೆದು ಹೋಗಲೇ ಎಂಬ ಆಲೋಚನೆ ಬರುತ್ತಿದ್ದಂತೆ ಸಾಲ ತೀರದ ತನ್ನ ಫ್ಲ್ಯಾಟಿನ ಇ.ಎಮ್.ಐ. ನೆನಪಾಯಿತು.

ನಾಳೆ ಬೆಳಿಗ್ಗೆ ಇದನ್ನೇ ಮೊದಲು ನಮೂದಿಸಬೇಕೆಂದು ನಿರ್ಧರಿಸಿದ.

★★★

ಪಾಯಿಂಟ್ ನಂಬರ್ ತ್ರೀ, ದಿ.10.1.2016, ಭಾನುವಾರ, ಬೆಳಿಗ್ಗೆ 11.50

ಅಕೌಂಟ್‌ನಲ್ಲಿರುವ ಹಣವನ್ನೆಲ್ಲಾ ಅಪ್ಪನ ಹೆಸರಿಗೆ ಟ್ರಾನ್ಸ್‌ಫರ್ ಮಾಡಿಬಿಡಬೇಕು.

ಅಷ್ಟನ್ನು ಟೈಪ್ ಮಾಡಿ ಅನ್ಯಮನಸ್ಕನಾಗಿ ಕುಳಿತ. ಕರುಳೇ ಬಾಯಿಗೆ ಬಂದಂತೆ ಅನ್ನಿಸಿ ಹೊಟ್ಟೆ ಕಿವಿಚಿದಂತಾಯಿತು. ಮಾಡುತ್ತಿರುವುದು ದಾನವೇನಲ್ಲವಲ್ಲಾ, ತನ್ನಪ್ಪನಿಗೆ ತಾನೇ ಎಂದುಕೊಂಡರೂ ವಿವರಿಸಲಾಗದ ತಳಮಳವೊಂದು ಉದ್ಭವಿಸಿ ಬಾಯೆಲ್ಲಾ ಹುಳಿ ಹುಳಿಯಾಗಿ